2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂ: 10/2021

| | | |
|---|---|---|
| ಸಾಕ್ಷಿದಾರರ ಹೆಸರು | - ರೇಣುಕಾಪ್ರಸಾದ್ ಬಿ.ವೈ. | ಪಿಡಬ್ಲೂ - 08 |
| ತಂದೆಯ ಹೆಸರು | - ಯಲ್ಲಪ್ಪ | ಸಿಡಬ್ಲೂ - 31 |
| ವಯಸ್ಸು | - 53 ವರ್ಷ | |
| ಉದ್ಯೋಗ | - ಡಿ.ವೈ.ಎಸ್.ಪಿ., ರಾಜ್ಯ ಅಪರಾಧ ದಾಖಲಾತಿ ವಿಭಾಗ (ಎಸ್.ಸಿ.ಆರ್.ಬಿ.), ಬೆಂಗಳೂರು | |
| ವಾಸ ಸ್ಥಳ | - ಬೆಂಗಳೂರು | |

ದಿನಾಂಕ: **29.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನಾನು ದಿ: 20.07.2019 ರಿಂದ ದಿ: 30.11.2020 ರವರೆಗೆ ತರೀಕೆರೆ ಉಪವಿಭಾಗದ ಆರಕ್ಷಕ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 17.10.2019 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.30 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿರುತ್ತೇನೆ.

3. ಅದೇ ದಿನ ಆರೋಪಿ ಪತ್ತೆಗಾಗಿ ನೇಮಿಸಿದ ನನ್ನ ಸಿಬ್ಬಂದಿ 1 ಮತ್ತು 2 ನೇ ಆರೋಪಿತರನ್ನು ದಸ್ತಗಿರಿ ಮಾಡಿ ನನ್ನ ಮುಂದೆ ಹಾಜರುಪಡಿಸಿದ್ದು, ನಾನು ದಸ್ತಗಿರಿ ಕ್ರಮ ಅನುಸರಿಸಿರುತ್ತೇನೆ. ಆರೋಪಿತರನ್ನು ಸೂಕ್ತ ಬಂದೊಬಸ್ತಿನಲ್ಲಿ ಠಾಣೆಯಲ್ಲಿ ಇರಿಸಿರುತ್ತೇನೆ.

4. ದಿ: 18.10.2019 ರಂದು ಕೃತ್ಯ ನಡೆದ ಸ್ಥಳವಾದ 1 ನೇ ಆರೋಪಿಯ ವಾಸದ ಮನೆಗೆ ಭೇಟಿ ನೀಡಿ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ.2 ಮತ್ತು 3 ರವರಿಗೆ ನಿಪಿ.5 ರಂತೆ ನೋಟೀಸು ನೀಡಿ ಸ್ಥಳದಲ್ಲಿ ಬೆಳಿಗ್ಗೆ 9.00 ರಿಂದ 10.00 ರವರೆಗೆ ನಿಪಿ.3 ರಂತೆ ಮಹಜರು ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ.3(ಸಿ) ಮತ್ತು 5(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಸಂಗ್ರಹಿಸಿದ ಭಾವಚಿತ್ರ ವನ್ನು ಈಗ

ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ.

5. ಅದೇ ದಿನ ಮೃತಳನ್ನು ದಪನ್ ಮಾಡಿದ್ದ ಗೌರಾಪುರ ಗ್ರಾಮದ ಕಬರಸ್ಥಾನಕ್ಕೆ ಬೇಟಿ ನೀಡಿ ಚಾಸಾ.4 ರವರು ತೋರಿಸಿದ ಸ್ಥಳದಲ್ಲಿ ಚಾಸಾ.5 ಮತ್ತು 6 ರವರಿಗೆ ನೋಟೀಸು ನೀಡಿ ಅವರುಗಳ ಸಮಕ್ಷಮ ಸ್ಥಳ ಮಹಜರು ಕ್ರಮವನ್ನು ನಿಪಿ.12 ರಂತೆ ಬೆಳಿಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿರುತ್ತೇನೆ. ಚಾಸಾ.5 ಮತ್ತು 6 ರವರಿಗೆ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.25 ಎಂದು ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ನಿಪಿ.12 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಸಂಗ್ರಹಿಸಿದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದೆ.

6. ಅದೇ ದಿನ ಚಾಸಾ.4, 12, 13, 14, 15, 16, 17 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ನಂತರ ನಮ್ಮ ಸಿಬ್ಬಂದಿ ಹೆಚ್.ಸಿ. ಪುರುಷೋತ್ತಮ ಇವರು ನೀಡಿದ ಕಲಂ.65(ಬಿ) ಸಾಕ್ಷ್ಯ ಅಧಿನಿಯಮದಡಿ ದೃಢೀಕರಣ ಪತ್ರ ಮತ್ತು ಸಿಡಿಯನ್ನು ಪಡೆದು ಕಡತದಲ್ಲಿ ಅಳವಡಿಸಿರುತ್ತೇನೆ. ದೃಢೀಕರಣ ಪತ್ರವನ್ನು ನಿಪಿ.26 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ.27 ಎಂದು ಗುರುತಿಸ ಲಾಯಿತು. ನಂತರ 1 ಮತ್ತು 2 ನೇ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

7. ದಿಃ 19.10.2019 ರಂದು ತರೀಕೆರೆ ನ್ಯಾಯಾಲಯದಿಂದ ಚಾಸಾ.1, 4, 12 ಮತ್ತು 15 ಇವರ ಕಲಂ.164 ರಡಿಯಲ್ಲಿ ನೀಡಿದ ಹೇಳಿಕೆಗಳನ್ನು ಪಡೆದು ಕಡತದಲ್ಲಿ ಅಳವಡಿಸಿದ್ದೇನೆ.

8. ಅದೇ ದಿನ ಮೃತಳ ಮೃತ ದೇಹದ ಶವ ತನಿಖೆ ನಡೆಸಲು ಚಾಸಾ.26 ರವರಿಗೆ ಮನವಿ ಸಲ್ಲಿಸಿದ್ದೇನೆ.

9. ದಿಃ 24.10.2019 ರಂದು ನ್ಯಾಯಾಲಯದಿಂದ 1 ಮತ್ತು 2 ರನ್ನು ಪೊಲೀಸ್ ಅಭಿರಕ್ಷೆಗೆ ಪಡೆದು ಕೃತ್ಯ ನಡೆದ ಸ್ಥಳಕ್ಕೆ ಅದೇ ದಿನ ಆರೋಪಿತರೊಂದಿಗೆ ಬೇಟಿ ನೀಡಿ ಪಂಚರಾದ ಚಾಸಾ.7 ಮತ್ತು 8 ರವರಿಗೆ ನೋಟೀಸು ನೀಡಿ ಕೃತ್ಯ ನಡೆದ ಸ್ಥಳದ ಮಹಜರು ಕ್ರಮವನ್ನು ಮದ್ಯಾಹ್ನ 2.30 ರಿಂದ 3.00 ರವರೆಗೆ ಜರುಗಿಸಿದ್ದೇನೆ. ಚಾಸಾ.7 ಮತ್ತು 8 ರವರಿಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.28 ಎಂದು ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು. ಮಹಜರನ್ನು ನಿಪಿ.29 ಎಂದು ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

10. ನಂತರ 1 ನೇ ಆರೋಪಿಯೊಂದಿಗೆ ಗೌರಾಪುರ ಗ್ರಾಮದ ಕಬರಸ್ಥಾನಕ್ಕೆ ಬೇಟಿ ಮೃತಳನ್ನು ದಫನ್ ಮಾಡಿದ ಸ್ಥಳದ ಮಹಜರು ಕ್ರಮ ಜರುಗಿಸಲು ಚಾಸಾ.9 ಮತ್ತು 10 ರವರಿಗೆ ನೋಟೀಸು ನೀಡಿ ಸ್ಥಳದಲ್ಲಿ ಮಹಜರನ್ನು ಮದ್ಯಾಹ್ನ 3.15 ರಿಂದ 3.45 ರವರೆಗೆ ಜರುಗಿಸಿರುತ್ತೇನೆ. ಚಾಸಾ.9 ಮತ್ತು 10 ರವರಿಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.14(ಬಿ) ಎಂದು ಗುರುತಿಸಲಾಯಿತು. ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.15(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸಂಗ್ರಹಿಸಿದ ಭಾವಚಿತ್ರ ಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.16 ಮತ್ತು 17 ಎಂದು ಗುರುತಿಸಲಾಗಿದೆ. 1 ನೇ ಆರೋಪಿಯ

ಮನೆಯಲ್ಲಿ ಸಂಗ್ರಹಿಸಿದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗ ನಿಪಿ.30 ಎಂದು ಗುರುತಿಸಲಾಯಿತು.

11. ನಂತರ ಚಾಸಾ.12 ರವರು ಮೃತಳ ಮತ್ತು 1 ನೇ ಆರೋಪಿಯ ಮದುವೆಯ ಕರೆಯೋಲೆ ಪತ್ರ ಮತ್ತು ನಿಖಾನಾಮೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಕಡತದಲ್ಲಿ ಅಳವಡಿಸಿದ್ದೇನೆ. ನಂತರ 1 ಮತ್ತು 2 ನೇ ಆರೋಪಿತರನ್ನು ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

12. ದಿಃ 02.11.2019 ರಂದು ಚಾಸಾ.26 ರವರು ಗೌರಾಪುರ ಗ್ರಾಮದ ಕಬರಸ್ಥಾನದಲ್ಲಿ ಶವ ಮೇಲೆತ್ತುವ ಸಮಯದಲ್ಲಿ, ಮೃತ ಶವ ಪರೀಕ್ಷೆಯನ್ನು ನಡೆಸುವ ಕಾಲಕ್ಕೆ ಮತ್ತು ಚಾಸಾ.29 ರವರು ಮರಣೋತ್ತರ ಪರೀಕ್ಷೆ ನಡೆಸುವ ಕಾಲಕ್ಕೆ ನಾನು ಹಾಜರಿದ್ದು ಸಹಕರಿಸುತ್ತೇನೆ.

13. ದಿಃ 11.11.2019 ರಂದು ಅಜ್ಜಂಪುರ ಗ್ರಾಮ ಪಂಚಾಯತಿಯ ಪಿಡಿಒ ಚಾಸಾ.24 ರವರು ನೀಡಿದ ಮೃತಳು ವಾಸವಿದ್ದ ಮನೆಯ ಅಸೆಸ್ ಮೆಂಟ್ ದಾಖಲೆಯನ್ನು ಕಡತದಲ್ಲಿ ಅಳವಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.31 ಎಂದು ಗುರುತಿಸಲಾಯಿತು. ಕವಚಪತ್ರವನ್ನು ನಿಪಿ.32 ಎಂದು ಸಾಕ್ಷಿಯ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು.

14. ದಿಃ 16.11.2019 ರಂದು ಚಾಸಾ.25 ರವರಿಂದ ಮೃತಳು ವಾಸವಿದ್ದ ಮನೆಯ ಮತ್ತು ಗೌರಾಪುರ ಗ್ರಾಮದ ಕಬರಸ್ಥಾನದ ನಕ್ಷೆ ತಯಾರಿಸಿ ನೀಡಿದ್ದನ್ನು ಕಡತದಲ್ಲಿ ಅಳವಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.33 ಮತ್ತು 34 ಎಂದು ಗುರುತಿಸಲಾಯಿತು. ಕವಚಪತ್ರವನ್ನು ನಿಪಿ.35 ಎಂದು ಸಾಕ್ಷಿಯ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

15. ದಿಃ 25.11.2019 ರಂದು ಮೃತಳ ಶವ ಪಂಚನಾಮೆಯನ್ನು ನಿಪಿ.9 ರಂತೆ ಸ್ವೀಕರಿಸಿ ಕಡತದಲ್ಲಿ ಅಳವಡಿಸಿದ್ದೇನೆ.

16. ಸಿಮ್ಸ್, ಶಿವಮೊಗ್ಗ ಆಸ್ಪತ್ರೆಯಿಂದ ಮೃತಳ ವಿಸೆರಾ ಮತ್ತು ಪ್ರಾವಿಷನಲ್ ಪಿ.ಎಂ. ವರದಿಯನ್ನು ಸ್ವೀಕರಿಸಿದ್ದೇನೆ. ಪ್ರಾವಿಷನಲ್ ಪಿ.ಎಂ. ವರದಿಯನ್ನು ನಿಪಿ.19 ಎಂದು ಗುರುತಿಸಲಾಗಿದೆ.

17. ನಂತರ ಬಿ.ಇ.ಒ., ತರೀಕೆರೆ ಚಾಸಾ.23 ರವರಿಂದ ಉರ್ದು ಭಾಷೆ ಯಲ್ಲಿದ್ದ ನಿಖಾನಾಮವನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ಪಡೆದಿರುತ್ತೇನೆ.

18. ದಿಃ 09.01.2020 ರಂದು ಆರ್.ಎಫ್.ಎಸ್.ಎಲ್. ಮಂಗಳೂರು ಕಚೇರಿಯಿಂದ ಎರಡು ವರದಿಗಳನ್ನು ಸ್ವೀಕರಿಸಿದ್ದು ಅವುಗಳನ್ನು ನಿಪಿ.20 ಮತ್ತು 21 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.20(ಬಿ) ಮತ್ತು 21(ಬಿ) ಎಂದು ಗುರುತಿಸಲಾಯಿತು.

19. ನಂತರ ನಿಪಿ.20 ಮತ್ತು 21 ನ್ನು ಸಿಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಕಳುಹಿಸಿ ಅಭಿಪ್ರಾಯವನ್ನು ಪಡೆದಿರುತ್ತೇನೆ. ಸದರಿ ಅಂತಿಮ ಅಭಿಪ್ರಾಯವನ್ನು ಈಗಾಗಲೇ ನಿಪಿ.22 ಎಂದು ಗುರುತಿಸಲಾಗಿದೆ.

20. ದಿಃ 13.02.2020 ರಂದು ಚಾಸಾ.18 ರಿಂದ 20 ರವರ ಹೇಳಿಕೆ ಗಳನ್ನು ಪಡೆದಿರುತ್ತೇನೆ.

21. ದಿಃ 24.02.2020 ರಂದು ಸಿಮ್ಸ್, ಶಿವಮೊಗ್ಗ ವೈದ್ಯಾಧಿ ಕಾರಿಗಳಿಗೆ ಮೃತಳ ಕತ್ತಿನ ಭಾಗದಲ್ಲಿ ಬಂಧನೀಯ ಗುರುತು ಕಂಡುಬಂದಿದೆಯೇ ಎಂಬ ಬಗ್ಗೆ ತಿಳಿಸುವಂತೆ ಮನವಿ ಸಲ್ಲಿಸಿದ್ದು ಸದರಿ ಮನವಿಯನ್ನು ಈಗಾಗಲೇ ನಿಪಿ.23 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು.

22. ದಿಃ 28.02.2020 ರಂದು ಸಿಮ್ಸ್, ಶಿವಮೊಗ್ಗ ವೈದ್ಯಾಧಿಕಾರಿಗಳಿಂದ ಮೃತಳ ಕತ್ತಿನ ಭಾಗದಲ್ಲಿ ಬಂಧನೀಯ ಗುರುತು ಕಂಡುಬಂದಿದೆ ಎಂಬ ಬಗ್ಗೆ ಅಭಿಪ್ರಾಯ ಪಡೆದಿರುತ್ತೇನೆ. ಸದರಿ ಅಭಿಪ್ರಾಯವನ್ನು ನಿಪಿ.24 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.24(ಬಿ) ಎಂದು ಗುರುತಿಸಲಾಯಿತು.

23. ದಿಃ 30.05.2020 ರಂದು ಏರ್ ಟೆಲ್ ಮತ್ತು ವೊಡಾಫೋನ್ ಸಂಸ್ಥೆಗಳಿಂದ ಚಾಸಾ.1 ಮತ್ತು ಆರೋಪಿತರು ಬಳಸುತ್ತಿದ್ದ ಮೊಬೈಲುಗಳ ಸಿಡಿಆರ್, ಅರ್ಜಿ ಪ್ರತಿಗಳನ್ನು ಮತ್ತು ಈ ಬಗ್ಗೆ ಕಲಂ.65(ಬಿ) ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪ್ರಮಾಣಪತ್ರಗಳನ್ನು ಪಡೆದು ಕಡತದಲ್ಲಿ ಅಳವಡಿಸಿದ್ದೇನೆ. ಸದರಿ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ಒಟ್ಟಾಗಿ ನಿಪಿ.36 ಎಂದು ಗುರುತಿಸಲಾಯಿತು.

24. ಚಾಸಾ.21 ರವರಿಂದ ಹೆಣ ಮೇಲೆತ್ತುವ ಕೆಲಸದ ವಿಡಿಯೋ ಮಾಡಿದ ಬಗ್ಗೆ ಕಲಂ.65(ಬಿ) ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪ್ರಮಾಣಪತ್ರವನ್ನು ಪಡೆದು ಕಡತದಲ್ಲಿ ಅಳವಡಿಸಿದ್ದೇನೆ.

25. ತನಿಖೆ ಮುಗಿಸಿ 1 ನೇ ಆರೋಪಿ ವಿರುದ್ಧ ಸಾಕ್ಷ್ಯಧಾರಗಳು ಇದ್ದ ಕಾರಣ ಆರೋಪಣಾ ಪಟ್ಟಿ ಸಲ್ಲಿಸಿದ್ದೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ